## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.39/2024

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ರಮೇಶ್ ಪಿ . ಎಸ್ | CW: 7 | PW: 5 |
| ತಂದೆಯ ಹೆಸರು | : | ಸಿದ್ದಲಿಂಗಪ್ಪ ಪಿ. ಎನ್ | | |
| ವಯಸ್ಸು | : | 36 | | |
| ವೃತ್ತಿ | : | ಪಿಎಸ್ ಐ, ರಟ್ಟಿಹಳ್ಳಿ ಪೊಲೀಸ್ ಠಾಣೆ | | |
| ವಾಸಸ್ಥಳ | : | ರಟ್ಟಿಹಳ್ಳಿ | | |

ದಿನಾಂಕಃ 05.05.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಸಾಕ್ಷಿಯ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ತೆಗೆದುಕೊಳ್ಳಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ–

ನಾನು ದಿಃ 18.11.2020 ರಿಂದ ದಿಃ 10.07.2023 ರವರೆಗೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 05.07.2023 ರಂದು ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿ ಇದ್ದಾಗ , ಸರ್ಕಾರದಿಂದ ಅನುಮತಿ ಪಡೆಯದೇ ಸಾಲಬಾಳು ಗ್ರಾಮದಲ್ಲಿ ಒಬ್ಬ ಆಸಾಮಿಯು ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಚಾಸಾ 1 ರವರು ಸ್ವ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.130/2023 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ದಾಳಿ

ನಡೆಸಲು ಚಾಸಾ 2 ಮತ್ತು 3 ರವರಿಗೆ ಸಹಕರಿಸುವಂತೆ ನೋಟೀಸ್ ಜಾರಿ ಮಾಡಿ ದಾಳಿಯ ಬಗ್ಗೆ ಮಾಹಿತಿ ನೀಡಿ ಅವರು ಒಪ್ಪಿಕೊಂಡ ಮೇರೆಗೆ ಚಾಸಾ 1 ರಿಂದ 6 ರವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಘಟನಾ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ಹೋಗಿ ಸ್ವಲ್ಪ ಮರೆಯಲ್ಲಿ ನಿಂತು ನೋಡಲಾಗಿ ಸಾಲಬಾಳು ಕ್ರಾಸ್ ನ ಪೆಟ್ಟಿಗೆ ಅಂಗಡಿ ಮುಂಭಾಗ ಒಬ್ಬ ಆಸಾಮಿಯು ಚೀಲದಲ್ಲಿ ಮಧ್ಯದ ಪೌಚ್ ಗಳನ್ನು ಮಾರಾಟ ಮಾಡುತ್ತಿದ್ದು ಕಂಡು ಬಂದು, ನಾವು ಎಲ್ಲರೂ ಸುತ್ತುವರೆದು ದಾಳಿ ಮಾಡಿದಾಗ ಸದರಿ ಆಸಾಮಿಯು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಹಿಡಿದುಕೊಂಡು ಹೆಸರು, ವಿಳಾಸ ಕೇಳಲಾಗಿ ಆತನ ಹೆಸರು ರಮೇಶ್ ನಾಯ್ಕ ತಂದೆ ಯಂಕ್ಯಾನಾಯ್ಕ , 45 ವರ್ಷ, ಸಾಲಬಾಳು ಗ್ರಾಮ ಎಂದು ತಿಳಿಸಿರುತ್ತಾನೆ.

ಪಂಚರ ಸಮಕ್ಷಮ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ ನ 31 ಹೈವರ್ಡ್ಸ್ ಚಿಯರ್ಸ್ ವಿಸ್ಕಿ ಪೌಚ್ ಗಳು ಇದ್ದವು. ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಎಲ್ಲಾ ಪೌಚ್ ಗಳನ್ನು ಪಂಚರ ಸಮಕ್ಷಮ ಚೀಲದಲ್ಲಿ ಹಾಕಿ ಎನ್ ಎಂ ಟಿ ಎಂದು ಸೀಲು ಮಾಡಿ ಪಂಚರ ಸಹಿಯನ್ನು ಅಂಟಿಸಿ ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹೋಗಿರುತ್ತೇವೆ ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 2.45 ಗಂಟೆ ಸಮಯದಲ್ಲಿ ಮಾಡಿರುತ್ತೇವೆ. ಪಂಚನಾಮೆಯ ಸಮಯದಲ್ಲಿ ಪೋಟೋ ತೆಗೆದಿರುತ್ತೇವೆ. ಮಹಜರ್ ನಂತರ ವಶಪಡಿಸಿಕೊಂಡ ಮಧ್ಯದ ಮಾಲನ್ನು ಹಾಗೂ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ವಶಪಡಿಸಿಕೊಂಡ ಮಧ್ಯದ ಮಾಲನ್ನು ಮಾಲು ಪಟ್ಟಿಯಲ್ಲಿ ಸೇರಿಸಿಕೊಂಡಿರುತ್ತೇನೆ. ಚಾಸಾ 1 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 9 ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಾಗೂ ಮು.ಮಾ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನಿಪಿ 1 ದೂರು, ನಿಪಿ 3 ಪಂಚನಾಮೆ, ನಿಪಿ 5. 65 ಬಿ ಪ್ರಮಾಣ ಪತ್ರದಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 1(ಬಿ), 3(ಡಿ), 5(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು :– ಆರೋಪಿಗಳ ಪರ ಶ್ರೀ.ಎಸ್ ಎಂ ಬಿ ವಕೀಲರರಿಂದ :–

ದಿಃ 05.07.2023 ರಂದು ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿ ಇದ್ದಾಗ , ಸರ್ಕಾರದಿಂದ ಅನುಮತಿ ಪಡೆಯದೇ ಸಾಲಬಾಳು ಗ್ರಾಮದಲ್ಲಿ ಒಬ್ಬ ಆಸಾಮಿಯು ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಚಾಸಾ 1 ರವರು ಸ್ವ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.130/2023 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ದಿನ ದಾಳಿ ನಡೆಸಲು ಚಾಸಾ 2 ಮತ್ತು 3 ರವರಿಗೆ ಸಹಕರಿಸುವಂತೆ ನೋಟೀಸ್ ಜಾರಿ ಮಾಡಿ ದಾಳಿಯ ಬಗ್ಗೆ ಮಾಹಿತಿ ನೀಡಿ ಅವರು ಒಪ್ಪಿಕೊಂಡ ಮೇರೆಗೆ ಚಾಸಾ 1 ರಿಂದ 6 ರವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಘಟನಾ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ಹೋಗಿ ಸ್ವಲ್ಪ ಮರೆಯಲ್ಲಿ ನಿಂತು ನೋಡಲಾಗಿ ಸಾಲಬಾಳು ಕ್ರಾಸ್ ನ ಪೆಟ್ಟಿಗೆ ಅಂಗಡಿ ಮುಂಭಾಗ ಒಬ್ಬ ಆಸಾಮಿಯು ಚೀಲದಲ್ಲಿ ಮಧ್ಯದ ಪೌಚ್ ಗಳನ್ನು ಮಾರಾಟ ಮಾಡುತ್ತಿದ್ದು ಕಂಡು ಬಂದು, ನಾವು ಎಲ್ಲರೂ ಸುತ್ತುವರೆದು ದಾಳಿ ಮಾಡಿದಾಗ ಸದರಿ ಆಸಾಮಿಯು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಹಿಡಿದುಕೊಂಡು ಹೆಸರು, ವಿಳಾಸ ಕೇಳಲಾಗಿ ಆತನ ಹೆಸರು ರಮೇಶ್ ನಾಯ್ಕ ತಂದೆ ಯಂಕ್ಯಾನಾಯ್ಕ , 45 ವರ್ಷ, ಸಾಲಬಾಳು ಗ್ರಾಮ ಎಂದು ತಿಳಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಂಚರ ಸಮಕ್ಷಮ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ ನ 31 ಹೈವರ್ಡ್ಸ್ ಚಿಯರ್ಸ್ ವಿಸ್ಕಿ ಪೌಚ್ ಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಾಸಾಯನಿಕ ವಿಶ್ಲೇಷಣಾ ಪರೀಕ್ಷೆಗಾಗಿ ಎಲ್ಲಾ ಪೌಚ್ ಗಳನ್ನು ಪಂಚರ ಸಮಕ್ಷಮ ಚೀಲದಲ್ಲಿ ಹಾಕಿ ಎನ್ ಎಂ ಟಿ ಎಂದು ಸೀಲು ಮಾಡಿ ಪಂಚರ ಸಹಿಯನ್ನು ಅಂಟಿಸಿ ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹೋಗಿರುತ್ತೇವೆ ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 2.45 ಗಂಟೆ ಸಮಯದಲ್ಲಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಂಚನಾಮೆಯ ಸಮಯದಲ್ಲಿ ಫೋಟೋ ತೆಗೆದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಹಜರ್ ನಂತರ ವಶಪಡಿಸಿಕೊಂಡ ಮಧ್ಯದ ಮಾಲನ್ನು ಹಾಗೂ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಶಪಡಿಸಿಕೊಂಡ ಮಧ್ಯದ ಮಾಲನ್ನು ಮಾಲು ಪಟ್ಟಿಯಲ್ಲಿ ಸೇರಿಸಿಕೊಂಡಿರುತ್ತೇನೆ ಎಂದು

ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 1 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 9 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಹಾಗೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.